ಬೀದರ್ ಜಿಲ್ಲೆಯಲ್ಲಿ ತೀವ್ರವಾದ ವಿದ್ಯುತ್ ಕೊರತೆ ನೀಗಿಸುವುದು

729 (271) **ಶ್ರೀ ರಹೀಂ ಖಾನ್ (ಬೀದರ್)** : ಮಾನ್ಯ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಬೀದರ್ ಜಿಲ್ಲೆಯಲ್ಲಿ ತೀವ್ರವಾದ ವಿದ್ಯುತ್ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಸಮರ್ಪಕವಾದ ಮತ್ತು ವೋಲ್ಟೇಜ್ ಏರಿಳಿತವಿಲ್ಲದೇ ಇರುವ ನಿರಂತರ ವಿದ್ಯುತ್ತನ್ನು ಸರಬರಾಜು ಮಾಡಲು ಸರಕಾರ ಯಾವ ಕ್ರಮಗಳನ್ನು ತೆಗೆದುಕೊಂಡಿದೆ; ಕಳೆದ 3 ವರ್ಷದಿಂದ ಇದಕ್ಕಾಗಿ ಬೀದರ್ ಜಿಲ್ಲೆಗೆ ಹಾಗೂ ಬೀದರ್ ಉತ್ತರ ಮತ ಕ್ಷೇತ್ರದ ವ್ಯಾಪ್ತಿಯಲ್ಲಿ ಮಾಡಿರುವ ಹಣದ ಮೊತ್ತವೆಷ್ಟು;

ಇ) ಹಾಗೂ ಇದರಿಂದ ತೆಗೆದುಕೊಂಡ ಕಾಮಗಾರಿಗಳ ವಿವರ ಗಳೇನು ಹಾಗೂ ಪ್ರಸ್ತುತ ಸಾಲಿನಲ್ಲಿ ತೆಗೆದುಕೊಳ್ಳುವ ಕಾಮಗಾರಿಗಳು (ಸಂಪೂರ್ಣ ಮಾಹಿತಿ ಒದಗಿಸುವುದು);

ಈ) ವಿದ್ಯುತ್ತಿನ ಏರಿಳಿತದಿಂದಾಗಿ ಬೀದರ್ ಜಿಲ್ಲೆಯ ಬೀದರ್ ಉತ್ತರ ಮತ ಕ್ಷೇತ್ರ ವ್ಯಾಪ್ತಿಯಲ್ಲಿ ಎಷ್ಟು ಪರಿವರ್ತಕಗಳು ಎಷ್ಟು ದಿನಗಳಿಂದ ಹಾಳಾಗಿವೆ ಮತ್ತು ಇವುಗಳನ್ನು ಬದಲಾವಣೆ ಮಾಡಲು ಸರಕಾರ ಯಾವ ಕ್ರಮಗಳನ್ನು ಕೈಗೊಂಡಿದೆ (ಪೂರ್ಣ ವಿವರಗಳನ್ನು ಗ್ರಾಮವಾರು ಅಂಶಗಳಲ್ಲಿ ಒದಗಿಸುವುದು)

ಕುಮಾರಿ ಶೋಭಾ ಕರಂದ್ಲಾಜೆ (ಇಂಧನ ಸಚಿವರು) :

ಅ) ಹೌದು.

ಆ) ರಾಜ್ಯದಲ್ಲಿ ಸಕಾಲದಲ್ಲಿ ಮಳೆಯಾಗದ ಕಾರಣ ಬೀದರ್ ಜಿಲ್ಲೆಯೂ ಸೇರಿದಂತೆ ರಾಜ್ಯವು ತೀವ್ರ ವಿದ್ಯುತ್ ಕೊರತೆಯನ್ನು ಅನುಭವಿಸುತ್ತಿದೆ. ಈ ಸಮಸ್ಯೆಯನ್ನು ನಿಭಾಯಿಸಲು ಸರ್ಕಾರವು ಹೊರ ರಾಜ್ಯಗಳಿಂದ ಮತ್ತು ಇತರೆ ಖಾಸಗಿ ವಿದ್ಯುತ್ ಉತ್ಪಾದಕರುಗಳಿಂದ 1.280 ಮೆ.ವ್ಯಾ ವಿದ್ಯುತ್‌ನ್ನು ಖರೀದಿಸಿ ಸ್ವಲ್ಪ ಮಟ್ಟಿಗೆ ಈ ಸಮಸ್ಯೆಯನ್ನು ನೀಗಿಸಲು ಕ್ರಮಗಳನ್ನು ಕೈಗೊಂಡಿದೆ. ಬೀದರ್ ಜಿಲ್ಲೆಯ ಗ್ರಾಮೀಣ ಪ್ರದೇಶಗಳಿಗೆ

ನಿರಂತರ ವಿದ್ಯುತ್ ಸರಬರಾಜು ಮಾಡುವ ಸಲುವಾಗಿ ಕೃಷಿ ಮತ್ತು ಕೃಷಿಯೇತರ ಸಂಪರ್ಕಗಳನ್ನು ಪ್ರತ್ಯೇಕಿಸಿ ಕೃಷಿ ವಲಯಕ್ಕಾಗಿ "ನಿರಂತರ ಜ್ಯೋತಿ" ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದ್ದು, ಸರ್ಕಾರವು ಕಳೆದ 3 ವರ್ಷಗಳಿಂದ 862.64 ಲಕ್ಷ ಖರ್ಚು ಮಾಡಿದೆ.

ಇ) ಕಳೆದ 3 ವರ್ಷಗಳಿಂದ ಬೀದರ್ ಜಿಲ್ಲೆಯ ಗ್ರಾಮೀಣ ಪ್ರದೇಶಗಳಿಗೆ ನಿರಂತರ ವಿದ್ಯುತ್ ಸರಬರಾಜು ಮಾಡಲು ನಿರಂತರ ಜ್ಯೋತಿ ಯೋಜನೆಯಡಿಯಲ್ಲಿ ತೆಗೆದುಕೊಂಡ ಕಾಮಗಾರಿಗಳ ಭೌತಿಕ ಪ್ರಗತಿ ಮತ್ತು ಆರ್ಥಿಕ ಪ್ರಗತಿಯ ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಈ) ಒಟ್ಟು 39 ಸಂಖ್ಯೆಯ ವಿದ್ಯುತ್ ಪರಿವರ್ತಕಗಳು 2012ರ ಜೂನ್ ತಿಂಗಳಲ್ಲಿ ಬೀದರ್ ಉತ್ತರ ಮತಕ್ಷೇತ್ರದಲ್ಲಿ ವಿಫಲವಾಗಿವೆ. ಈ ವಿಫಲವಾದ ಪರಿವರ್ತಕಗಳನ್ನು ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿಯ ವಿದ್ಯುತ್ ಪರಿವರ್ತಕ ದುರಸ್ತಿ ಕೇಂದ್ರಗಳಲ್ಲಿ ದುರಸ್ತಿಗೊಳಿಸಿ ವಿಫಲಗೊಂಡ ಪರಿವರ್ತಕಗಳನ್ನು ಬದಲಾಯಿಸಲಾಗಿದೆ. ವಿಫಲವಾದ ವಿದ್ಯುತ್ ಪರಿವರ್ತಕಗಳ ಗ್ರಾಮವಾರು ವಿವರಗಳು ಈ ಕೆಳಗಿನಂತಿವೆ.

ಕ್ರ ಸಂ.	ಗ್ರಾಮಗಳ ಹೆಸರು	ಸಾಮರ್ಥ್ಯ
1	ಬರೂರ	63 ಕೆ.ವಿ
2	ನಾಗೂರ	25 ಕೆ.ವಿ
3	ಅಮಲಾಪೂರ	100 ಕೆ.ವಿ
4	ನಾಗೂರ ಐ.ಪಿ.ಸೆಟ್	100 ಕೆ.ವಿ
5	ಕನ್ನಳ್ಳಿ	100 ಕೆ.ವಿ
6	ಮರಕಲ್ಲ ಐ.ಪಿ.ಸೆಟ್	63 ಕೆ.ವಿ
7	ಹಿಪ್ಪಳಗಾಂವ	63 ಕೆ.ವಿ
8	ಗುರುನಾನಕ ಕಾಲೋನಿ	63 ಕೆ.ವಿ
9	ಟಿ.ಡಿ.ಬಿ. ಕಾಲೋನಿ	63 ಕೆ.ವಿ
10	ಕೈಲಾಸ ಸ್ಟೋನ್	100 ಕೆ.ವಿ
11	ಸಾತೋಳ್ಳಿ	100 ಕೆ.ವಿ

12	ಶಿವನಗರ ಉತ್ತರ	25 ಕೆ.ವಿ
13	ಕೆ.ಎಚ್.ಬಿ. ಕಾಲೋನಿ	25 ಕೆ.ವಿ
14	ಅಷ್ಟೂರ	100 ಕೆ.ವಿ
15	ಜನವಾಡ	63 ಕೆ.ವಿ
16	ಕುಂಬರವಾಡ	100 ಕೆ.ವಿ
17	ಸಾಗರ ಘಟಕ	100 ಕೆ.ವಿ
18	ಮಲ್ಲಕಾಪೂರು	100 ಕೆ.ವಿ
19	ಶ್ರೀಮಂಡಲ	100 ಕೆ.ವಿ
20	ಅಲ್ಲಾಪೂರ	100 ಕೆ.ವಿ
21	ಹಾರೂರಗೇರಿ	63 ಕೆ.ವಿ
22	ಚಿಲ್ಲರ್ಗಿ	100 ಕೆ.ವಿ
23	ಸುತ್ತಾನಪೂರ	100 ಕೆ.ವಿ
24	ಹಮೀಲಾಪೂರ	63 ಕೆ.ವಿ
25	ಅಲ್ಲಮಪ್ರಭು ನಗರ	63 ಕೆ.ವಿ
26	ಭೂಮನಳ್ಳಿ	100 ಕೆ.ವಿ
27	ಬರೂರ	63 ಕೆ.ವಿ
28	ಗುಮ್ಮಾ	63 ಕೆ.ವಿ
29	ಚಿಮ್ಮಕೋಡ	63 ಕೆ.ವಿ

ಕರ್ನಾಟಕ ವಿಧಾನ ಸಭೆಯ ಮಾನ್ಯ ಸದಸ್ಯರಾದ ಶ್ರೀ ರಹೀಂ ಖಾನ್‌ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 271ಕ್ಕೆ ಅನುಬಂಧ

ಬೀದರ್ ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ ನಿರಂತರ ಜ್ಯೋತಿ ಯೋಜನೆಯಡಿಯಲ್ಲಿ ತೆಗೆದುಕೊಂಡ ವರ್ಷಾವಾರು ಕಾಮಗಾರಿಗಳ ವಿವರಗಳು

ಕ್ರ. ಸಂ.	ತಾಲ್ಲೂಕು	ಭೌತಿಕ ಪ್ರಗತಿ			ಆರ್ಥಿಕ ಪ್ರಗತಿ (ರೂ.ಲಕ್ಷಗಳಲ್ಲಿ)			ಒಟ್ಟು ಆರ್ಥಿಕ ಪ್ರಗತಿ (ರೂ.ಲಕ್ಷ ಗಳಲ್ಲಿ)
		2009–10	2010–11	2011–12	2009–10	2010–11	2011–12	
1	ಔರಾದ	20%	25%	40%	–	151.04	176.33	862.64
2	ಭಾಲ್ಕಿ	–	5%	20%	–	0	92.31	
3	ಹುಮನಾಬಾದ	–	10%	30%	–	390.36	20.5	
4	ಬಸವಕಲ್ಯಾಣ	–	10%	40%	–	18.45	13.65	